**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಸತ್ರ ಪ್ರಕರಣ ಸಂಖ್ಯೆಃ 81/2019**

ದಿನಾಂಕಃ 10.07.2024
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಸಾ. - 10 ಅ.ಸಾ. - 8

| | | |
|---|---|---|
| ಹೆಸರು | ಃ | ಶ್ರೀ. ವಿಶ್ವನಾಥ್ ಎನ್ |
| ತಂದೆಯ ಹೆಸರು | ಃ | ನರಸಿಂಹ ಮೂರ್ತಿ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಮುಖ್ಯ ಪೇದೆ ಸಂಖ್ಯೆ 397, ತಾವರೆಕೆರೆ ಆರಕ್ಷಕ ಠಾಣೆ |
| ವಾಸ | ಃ | ತಾವರೆಕೆರೆ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು 2018 ರ ಆಗಸ್ಟ್ ತಿಂಗಳಲ್ಲಿನಲ್ಲಿ ತಾವರೆಕೆರೆ ಆರಕ್ಷಕ ಠಾಣೆಯಲ್ಲಿ ಪೇದೆ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆ. ದಿನಾಂಕ 19.08.2018 ರ ಸಂಜೆ 7.00 ರ ಸಮಯಕ್ಕೆ ಠಾಣಾ ಪ್ರಭಾರದಲ್ಲಿದ್ದ ದೋ.ಪ.ಸಾಕ್ಷಿ-01 ರವರಿಗೆ ಕುರುಬರ ಪಾಳ್ಯದ ಚಂದ್ರಪ್ಪ ವೃತ್ತದ ಬಳಿ ಸುಮಾರು 8 ರಿಂದ 10 ಜನ ದಾರಿಯಲ್ಲಿ ಹೋಗಿ ಬರುತ್ತಿದ್ದ ಜನರಿಗೆ ಸುಲಿಗೆ ಮಾಡಲು ಪ್ರಯತ್ನ ಮಾಡುತ್ತಿರುವುದಾಗಿ ಮಾಹಿತಿ ಬಂದಿರುತ್ತದೆ. ನಂತರ ದೋ.ಪ.ಸಾಕ್ಷಿ-01 ರವರು ನನ್ನನ್ನು ಮತ್ತು ದೋ.ಪ.ಸಾಕ್ಷಿ-5 ರಿಂದ 9 ರವರನ್ನು ಮತ್ತು ಇಬ್ಬರು ಪಂಚರನ್ನು ಕರೆದುಕೊಂಡು ಮಾಹಿತಿ ಹೇಳಿದ ಸ್ಥಳಕ್ಕೆ ಹೊರಟರು. ಸ್ಥಳದ ಹತ್ತಿರ ಮರೆಯಲ್ಲಿ ನಿಂತುಕೊಂಡು ನೋಡಿದಾಗ ಸುಮಾರು 8- ರಿಂದ 10 ಜನ ಡಿಂಗ್ರಿ ನಾಗರಾಜನ ಕೊಲೆ ಪ್ರಕರಣದಲ್ಲಿ ನಮ್ಮ ಬಾಸ್ ಜಗ್ಗಿ ಆರೋಪಿ ಆಗಿದ್ದು ಸದರಿ ಪ್ರಕರಣ ನಡೆಸಲು ಹಣ ಬೇಕಾಗಿದ್ದು ಹಣ ಹೊಂದಿಸಲು ಜನರಿಂದ ಸುಲಿಗೆ ಮಾಡಬೇಕೆಂದು

ಮಾತಾನಾಡಿಕೊಳ್ಳುತ್ತಿದ್ದರು. ನಾವು ಅವರಿಂದ ಸುಮಾರು 5 ರಿಂದ 6 ಅಡಿ ದೂರದಲ್ಲಿ ಇದ್ದೇವು. ನಾವು ಅವರುಗಳನ್ನು ಸುತ್ತುವರೆದು ಹಿಡಿಯಲು ಪ್ರಯತ್ನ ಮಾಡಿದ್ದು ಅವರುಗಳಲ್ಲಿ ಆರು ಜನರನ್ನು ಹಿಡಿದಿದ್ದು ಉಳಿದ ನಾಲ್ಕು ಜನ ತಪ್ಪಿಸಿಕೊಂಡು ಹೋಗಿರುತ್ತಾರೆ.

ಅಂಗ ಶೋಧನೆ ಮಾಡಿದಾಗ ಅವರ ಬಳಿ 2 ಲಾಂಗ್, ಒಂದು ಡ್ರಾಗರ್, ಒಂದು ದೊಣ್ಣೆ ಇದ್ದು ಒಂದು ದ್ವಿ ಚಕ್ರ ವಾಹನ ಇತ್ತು. ಹಿಡಿದವರ ಹೆಸರು ಮತ್ತು ವಿಳಾಸ ವಿಚಾರಿಸಿದ್ದು, ಅವರು ಆರೋಪಿ ಸಂಖ್ಯೆ-2 ರಿಂದ 7 ಇರುತ್ತಾರೆ. ತಪ್ಪಿಸಿಕೊಂಡು ಹೋದವರ ಹೆಸರು ಮತ್ತು ವಿಳಾಸ ಕೇಳಿದ್ದು ಹೇಳಿರುತ್ತಾರೆ. ಯಾರ ಬಳಿ ಲಾಂಗ್, ಡ್ರಾಗರ್ ಮತ್ತು ದೊಣ್ಣೆ ಇದ್ದವು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಸ್ಥಳದಲ್ಲಿ 2 ಲಾಂಗ್, ಒಂದು ಡ್ರಾಗರ್, ಒಂದು ದೊಣ್ಣೆ ಮತ್ತು ಒಂದು ದ್ವಿ ಚಕ್ರ ವಾಹನ ವಶಪಡಿಸಿಕೊಂಡು ಆರೋಪಿಗಳನ್ನು ಠಾಣೆಗೆ ಕರೆದು ಕೊಂಡು ಬಂದಿರುತ್ತೇವೆ. ಸ್ಥಳದಲ್ಲಿ ಈ ಕುರಿತು ಪಂಚನಾಮೆ ತಯಾರು ಮಾಡಿದ್ದು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ನಿಶಾನೆ ಪಿ-1 ರಲ್ಲಿನ ಸಾಕ್ಷಿ ಸಹಿಯನ್ನು ನಿಶಾನೆ ಪಿ-1(ಎಫ್ ) ಎಂದು ಗುರುತಿಸಲಾಯಿತು. ನಾವು ಹಿಡಿದ ಆರೋಪಿಗಳನ್ನು ಮತ್ತು ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಆರೋಪಿ-6 ಇದ್ದಾರೆ. ಮು.ಮಾ.1 ರಿಂದ 4 ವಶಪಡಿಸಿಕೊಂಡ ವಸ್ತುಗಳು ಇರುತ್ತವೆ. ನಿ.ಪಿ. ಫೋಟೋದಲ್ಲಿನ ದ್ವಿಚಕ್ರ ವಾಹನ ಸ್ಥಳದಿಂದ ವಶಪಡಿಸಿಕೊಂಡ ವಾಹನ ಇರುತ್ತದೆ. ಈ ಕುರಿತು ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿದ್ದೇನೆ.

**<u>ಪಾಟೀ ಸವಾಲುಃ ಶ್ರೀ.ಟಿ.ಜಿ. ವಕೀಲರಿಂದ.</u>**

ದಿನಾಂಕ 19.08.2018 ರಂದು ನನ್ನನ್ನು ಸಾಮಾನ್ಯ ಕರ್ತವ್ಯಕ್ಕೆ ನೇಮಕ ಮಾಡಿತ್ತು. ನನ್ನದು ಬೀಟ್ ಕರ್ತವ್ಯ ಇರಲಿಲ್ಲ. ಆಗ ಠಾಣೆಯಲ್ಲಿ ಸುಮಾರು 7 ರಿಂದ 8 ಜನ ಸಿಬ್ಬಂದಿಗಳು ಇದ್ದರು. ಚಂದ್ರಪ್ಪ ವೃತ್ತ ಮತ್ತು ಕುರುಬರ ಪಾಳ್ಯದ ಬೀಟ್ ಕರ್ತವ್ಯದಲ್ಲಿ ಯಾರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಠಾಣೆಯಿಂದ ಸುಮಾರು 10 ಕಿ.ಮೀ ದೂರದಲ್ಲಿ ಕುರುಬರ ಪಾಳ್ಯ ಬರುತ್ತದೆ. ಚಂದ್ರಪ್ಪ ವೃತ್ತಕ್ಕೆ ಮೊದಲೇ ಕುರುಬರ ಪಾಳ್ಯ ಬರುತ್ತದೆ. ಚಂದ್ರಪ್ಪ ವೃತ್ತಕ್ಕೆ ಸುಮಾರು 4 ರಿಂದ 5 ಕಡೆಯಿಂದ ಬರಬಹುದು ಎನ್ನುವುದು ಸರಿ ಇದೆ.

ನಮಗೆ ಸಂಜೆ 7.00 ಕ್ಕೆ ವಿಷಯ ತಿಳಿಸಿದ್ದು ಸುಮಾರು 7.02 ಕ್ಕೆ ಠಾಣೆ ಬಿಟ್ಟಿರುತ್ತೇವೆ. ಠಾಣೆಯಿಂದ ಸ್ಥಳಕ್ಕೆ ಹೋಗಲು ಸುಮಾರು ಅರ್ಧ ಗಂಟೆ ಸಮಯ ಬೇಕಾಗುತ್ತದೆ ಎನ್ನುವುದು ಸರಿ ಇದೆ. ನಾವು ಸ್ಥಳಕ್ಕೆ ಹೋದಾಗ ಕತ್ತಲಾಗಿತ್ತು. ನಾವು ಹೋಗಿದ್ದು ಸರ್ಕಾರಿ ಜೀಪ್ ನಲ್ಲಿ. ಘಟನೆ ಜಾಗ ನೇರ ರಸ್ತೆ ಇರುತ್ತದೆ ಮತ್ತು ಏಕಪಥ ಇರುತ್ತದೆ. ಸುಮಾರು 10 ರಿಂದ 15 ಅಡಿ ದೂರದಲ್ಲಿ ವಾಹನ ನಿಲ್ಲಿಸಿದ್ದೆವು. ಕತ್ತಲೆಯಲ್ಲಿ ವಾಹನದ ದೀಪದ ಬೆಳಕಿನಿಂದ ದೂರದಿಂದಲೇ ಸದರಿ ವಾಹನ ಕಾಣುತ್ತದೆ ಎನ್ನುವುದು ಸರಿ ಇದೆ. ಘಟನೆ ನಡೆಯಿತು ಎನ್ನುವ ಜಾಗ ಬಯಲು ಪ್ರದೇಶ ಎಂದರೆ ಇರಬಹುದು. ನಾನು ಘಟನೆ ಸ್ಥಳಕ್ಕೆ ಹೋಗಿರದ ಕಾರಣದಿಂದಲೇ ನಿಖರವಾಗಿ ಹೇಳಲು ಆಗುತ್ತಿಲ್ಲ ಎನ್ನುವುದು ಸರಿ ಅಲ್ಲ.

ನಾವು ಒಟ್ಟು 5 ಜನ ಸಿಬ್ಬಂದಿ ಇದ್ದೆವು. ಪಂಚರು ಸೇರಿ ಎಲ್ಲಾರು ಒಂದೇ ವಾಹನದಲ್ಲಿ ಇದ್ದೆವು. ಯಾರು ಯಾರಿಂದ ಯಾವ ವಸ್ತು ವಶಕ್ಕೆ ಪಡೆದರು ಎಂದು ನನಗೆ ಹೇಳಲು ಆಗುವುದಿಲ್ಲ. ಮು.ಮಾ.1 ರಿಂದ 4 ರ ಮೇಲೆ ಯಾರ ಸಹಿ ಪಡೆದು ಚೀಟಿ ಅಂಟಿಸಿರುವುದಿಲ್ಲ. ನಾನು ನನ್ನ ಹೇಳಿಕೆಯಲ್ಲಿ ಆರೋಪಿಗಳು ಹೇಗೆ ಮತ್ತು ಯಾವ ವಾಹನದಲ್ಲಿ ಬಂದಿರುತ್ತಾರೆ ಎನ್ನುವ ಬಗ್ಗೆ ಹೇಳಿಲ್ಲ. ನಮಗೆ ಮಾರಕಾಸ್ತ್ರಗಳು ಇದ್ದರು ಯಾವುದೇ ರೀತಿ ಅಪಾಯ ಆಗಿಲ್ಲ ಎನ್ನುವುದು ಸರಿ ಇದೆ. ನಾವು ಸ್ಥಳಕ್ಕೆ ಹೋಗಿಯೇ ಇಲ್ಲ, ಯಾವುದೇ ಆರೋಪಿಗಳನ್ನು ಹಿಡಿದಿಲ್ಲ, ಯಾವುದೇ ಮಾರಕಾಸ್ತ್ರಗಳನ್ನು ಮತ್ತು ದ್ವಿಚಕ್ರ ವಾಹನ ವಶಪಡಿಸಿಕೊಂಡಿಲ್ಲ ಎನ್ನುವುದು ಸರಿ ಅಲ್ಲ. ಆರೋಪಿಗಳಿಂದ ಗುರುತು ಚೀಟಿ, ವಾಲೆಟ್ ಇತ್ಯಾದಿ ಯಾವುದನ್ನು ವಶಪಡಿಸಿಕೊಂಡಿಲ್ಲ. ಆರೋಪಿಗಳು ಎಲ್ಲರು ತಾವರೆಕೆರೆಯ ಅಕ್ಕಪಕ್ಕದ ಗ್ರಾಮದವರು ಎಂದರೆ ಕೆಲವರು ಮಾತ್ರ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆಯದೆ ಇದ್ದರು ನನ್ನ ಮೇಲಾಧಿಕಾರಿ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ ಜಿ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.